ದಿನಾಂಕಃ 17-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- 1 ರಿಂದ 3 ನೇ ಪ್ರತಿವಾದಿಯರ ಪರವಾಗಿ ಶ್ರೀ. ಬಿ.ಹೆಚ್.ಪಿ. ವಕೀಲರಿಂದಃ-**

ನನ್ನ ತಂದೆಯ ಹೆಸರು ರಾಮಣ್ಣ. ವೀರಲಕ್ಕಣ್ಣನಿಗೆ ಒಟ್ಟು ಮೂರು ಜನ ಹೆಣ್ಣು ಮಕ್ಕಳು. ಅವರುಗಳೆಂದರೆ ಈರಮ್ಮ, ಸಾವಿತ್ರಮ್ಮ ಮತ್ತು ಶಾರದಮ್ಮ. ನಾನು ಚಿಕ್ಕವನಾಗಿದ್ದ ಸಮಯದಲ್ಲಿ ವೀರಲಕ್ಕಣ್ಣರವರು ನನ್ನನ್ನು ದತ್ತು ಪಡೆದುಕೊಂಡಿದ್ದರು. ಆದರೆ, ಯಾವಾಗ ಎಂಬುದು ನನಗೆ ಗೊತ್ತಿಲ್ಲ. ನನ್ನನ್ನು ದತ್ತು ತೆಗೆದುಕೊಂಡ ಬಗ್ಗೆ ಚಿತ್ತಣ್ಣ ಮತ್ತು ಹನುಮಂತರಾಯಪ್ಪರವರು ನೋಡಿರುತ್ತಾರೆ. ಆ ದತ್ತು ಕಾರ್ಯಕ್ರಮಕ್ಕೆ ಪುರೋಹಿತರಾಗಿ ವೀರಭದ್ರಯ್ಯರವರು ಇದ್ದರು. ಈ ರೀತಿ ದತ್ತು ಪಡೆದುಕೊಂಡ ಬಗ್ಗೆ ದಾಖಲೆಗಳು ಇರುವುದಿಲ್ಲ. ನನ್ನ ಮದುವೆಗೆ ಸಂಬಂಧಿಸಿದ ಆಮಂತ್ರಣ ಪತ್ರಿಕೆ ಇದೆ . ವೀರಭದ್ರಯ್ಯ ಎಂಬ ಪುರೋಹಿತರು ಈಗಾಗಲೇ ಮೃತಪಟ್ಟಿರುತ್ತಾರೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಸಾಕ್ಷಿಯು, ನಾನು 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ಆನಂತರ ನುಡಿಯುತ್ತಾರೆ. ನನ್ನನ್ನು ಶಾಲೆಗೆ ನನ್ನ ತಂದೆಯವರು ಸೇರಿಸಿದರು. ನನ್ನ ಶಾಲೆಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ವೀರಲಕ್ಕಣ್ಣರವರು ಸುಮಾರು 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ವೀರಲಕ್ಕಣ್ಣರವರು ಮೃತಪಟ್ಟಾಗ ಅವರಿಗೆ ಸುಮಾರು 80

ವರ್ಷ ವಯಸ್ಸಾಗಿತ್ತು.

ನನ್ನ ಕುಟುಂಬಕ್ಕೆ ಸಂಬಂಧಿಸಿದ ನಿಡಿ.1 ರಂತಹ ಪಡಿತರ ಚೀಟಿಯನ್ನು ಇತ್ತೀಚೆನೆ ದಿನಗಳಲ್ಲಿ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ಪಡಿತರ ಚೀಟಿ ಯಾರಿಗೆ ಸಂಬಂಧಪಟ್ಟಿದ್ದು ಎಂಬುದರ ಬಗ್ಗೆ ಯಾವುದೇ ನಮೂದುಗಳು ಇಲ್ಲ ಎಂದರೆ ಸರಿ. ನಿಡಿ.2 ನ್ನು ಈ ದಾವೆ ಸಲ್ಲಿಸಿದ ನಂತರ ಸೃಷ್ಟಿಸಿಕೊಂಡು ಬಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವೀರಲಕ್ಕಣ್ಣರವರಿಗೆ ಪುಟ್ಟೀರಪ್ಪ ಎಂಬ ಒಬ್ಬ ಸಹೋದರ ಇದ್ದರು. ಚಿತ್ತಣ್ಣ ಮತ್ತು ಹನುಮಂತರಾಯಪ್ಪರವರಿಗೆ ಸುಮಾರು 60 ವರ್ಷ ವಯಸ್ಸಾಗಿರಬಹುದು. ದಾವಾ ಆಸ್ತಿಯಲ್ಲಿ ನಾನು ಎಂದೂ ಸಹ ಉಳುಮೆ ಮಾಡಿರುವುದಿಲ್ಲ, ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇರುವ ಬಾವಿಯಲ್ಲಿ ಊಳು ತೆಗೆಸಿ ಸಮ ಮಾಡಿಸಿರುತ್ತೇನೆ. ಈ ರೀತಿ ಬಾವಿಯಲ್ಲಿ ಊಳು ತೆಗೆಸಿ ಸಮ ಮಾಡುವ ಎಲ್ಲಾ ಖರ್ಚನ್ನು ವೀರಲಕ್ಕಣ್ಣರವರು ಚಿತ್ತಣ್ಣ ಎಂಬುವವರ ಹತ್ತಿರ ರೂ.50,000/- ಸಾಲ ಮಾಡಿದ್ದು, ಅದನ್ನು ನಾನೇ ತೀರಿಸಿರುತ್ತೇನೆ. ಈ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ವಾದಿಯ ಮಗಳನ್ನೇ ಮದುವೆ ಮಾಡಿಕೊಂಡಿರುತ್ತೇನೆ. ವೀರಲಕ್ಕಣ್ಣರವರು ಮೃತಪಟ್ಟ ನಂತರ ನನ್ನ ಮದುವೆ ಆಗಿರುತ್ತದೆ. ಸ.ನಂ .27/1 ರ ಆಸ್ತಿಯ ಬಗ್ಗೆ ವೀರಲಕ್ಕಣ್ಣರವರು ವಿಲ್ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ.

ನಾನು ವೀರಲಕ್ಕಣ್ಣರವರ ದತ್ತು ಮಗ ಆಗಿರುವುದಿಲ್ಲ, ವಾದಿಯ ಮಗಳನ್ನು ಮದುವೆ ಆಗಿರುವ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ವೀರಲಕ್ಕಣ್ಣರವರ ಕುಟುಂಬಕ್ಕೂ ಯಾವುದೇ ಸಂಬಂಧ ಇರುವುದಿಲ್ಲ, ನಾನು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ